**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ಮೂಡಿಗೆರೆ**

**ಸಿ.ಸಿ.ಸಂಖ್ಯೆ** 1108/2023

**ಪಿರ್ಯಾದಿ** : ಮೆಸರ್ಸ್ ಸಾಲ್ಡಾನ ಇಂಟರ್ ನ್ಯಾಷನಲ್
ಪಾರ್ಟನರ್ಶಿಪ್ ಫರ್ಮ್, ಕೆ.ಎಂ. ರಸ್ತೆ,
ಮೂಡಿಗೆರೆ ಟೌನ್ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ.
ಪ್ರತಿನಿಧಿಸುವವರುಃ ಮ್ಯಾನೇಜಿಂಗ್ ಪಾರ್ಟ್ನರ್,
ಮಿ.ನೋರ್ಬೆರ್ಟ್ ಸಾಲ್ಡಾನ,
ವಯಸ್ಸುಃ 69 ವರ್ಷ, ಬಿನ್ ಲೇಟ್ ಬಿ.ಎ.ಸಾಲ್ಡಾನ,
ವಾಸಃ ಕುಂದೂರು ಗ್ರಾಮ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.

**ವಿರುದ್ಧ**

**ಆರೋಪಿ** : ಶ್ರೀ ಕೆ.ಇ.ಕೆಂಚೇಗೌಡ,
ವಯಸ್ಸು ಸುಮಾರು 60 ವರ್ಷ,
ಬಿನ್ ಲೇಟ್ ಈರೇಗೌಡ,
ವಾಸಃ ಕೋಡೆಗದ್ದೆ, ಕುಂದೂರು ಅಂಚೆ,
ಮೂಡಿಗೆರೆ ತಾಲ್ಲೂಕು.

**ಆಪಾದನೆಯ ಸಾರಾಂಶ**

ಶ್ರೀ ವಿಶ್ವನಾಥ್ ಎ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ–

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯ ಗ್ರಾಹಕರಾಗಿದ್ದು ಹಲವಾರು ವರ್ಷಗಳಿಂದ ಕಾಫಿಬೀಜವನ್ನು ಮಾರಾಟ ಮಾಡಲು ಮುಂಗಡವನ್ನು ತೆಗೆದುಕೊಳ್ಳುತ್ತಿದ್ದು, ಸದರಿ ಸಂಸ್ಥೆಯೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುತ್ತೀರಿ, ದಿಃ 26.03.2021 ರಂದು ಕಾಫಿಬೀಜವನ್ನು ನೀಡುವುದಾಗಿ ಭರವಸೆ ನೀಡಿ ಪಿರ್ಯಾದಿ ಸಂಸ್ಥೆಯಿಂದ ರೂ.12,19,201/- ಹಣವನ್ನು ಮುಂಗಡವಾಗಿ ಪಡೆದಿದ್ದು, ನಂತರ ಕಾಫಿಬೀಜವನ್ನು ಪೂರೈಸಲು ನೀವು ವಿಫಲರಾದ ಕಾರಣ, ಸದರಿ ಮುಂಗಡ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಬಣಕಲ್ ಶಾಖೆಯ ಚೆಕ್ 538801, ದಿನಾಂಕ 20.06.2023, ರೂ.12,19,201/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ" (**Funds Insufficient**) ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 26.06.2023 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿಗೆ ದಿನಾಂಕ 18.10.2023 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd**/-

ಮೂಡಿಗೆರೆ

ದಿನಾಂಕಃ 18.10.2023

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.